ಅನುಬಂಧ

ಕ್ರಮ ಸಂಖ್ಯೆ	ಹುದ್ದೆಯ ಪದನಾಮ	೩೧-೧೨-೮೦ರಲ್ಲಿದ್ದಂತೆ ಮಂಜೂರಾದ ಆರಕ್ಷಕ ಇಲಾಖೆಯ ಬಲ	೩೧-೧೨-೮೫ರಲ್ಲಿದ್ದಂತೆ ಮಂಜೂರಾದ ಆರಕ್ಷಕ ಇಲಾಖೆಯ ಬಲ
		ಸಿವಿಲ್ : ಸಶಸ್ತ್ರ : ಮೀಸಲು ಪಡೆ ಸೇರಿ	ಸಿವಿಲ್ : ಸಶಸ್ತ್ರ ಮೀಸಲು ಪಡೆ ಸೇರಿ
೧	ಮಹಾ ನಿರ್ದೇಶಕ ಮತ್ತು ಆರಕ್ಷಕ ಮಹಾ ನಿರೀಕ್ಷಕರು	೧	೧
೨	ವಿಶೇಷ ಆರಕ್ಷಕ ಮಹಾ ನಿರೀಕ್ಷಕರು	೧	೪
೩	ಅಪರ ಆರಕ್ಷಕ ಮಹಾ ನಿರೀಕ್ಷಕರು	೩	ಇಲ್ಲ
೪	ಆರಕ್ಷಕ ಉಪ ಮಹಾ ನಿರೀಕ್ಷಕರು	೧೩	೨೦
೫	ಆರಕ್ಷಕ ಅಧೀಕ್ಷಕರು : ಕಮಾಂಡೆಂಟ್‌ರು ಪ್ರಾಶಂಪಾಲರು	೫೯	೬೬
೬	ಸಹಾಯಕ ಆರಕ್ಷಕ ಅಧೀಕ್ಷಕರು : ಆರಕ್ಷಕ ಉಪ ಅಧೀಕ್ಷಕರು : ಸಹಾಯಕ ಕಮಾಡೆಂಟ್‌ರು	೧೪೧	೧೭೧
೭	ಆರಕ್ಷಕ ನಿರೀಕ್ಷಕರು. ಸಶಸ್ತ್ರ ಆರಕ್ಷಕ ಉಪ ನಿರೀಕ್ಷಕರು	೪೬೫	೫೧೬
೮	ಆರಕ್ಷಕ ಉಪ ನಿರೀಕ್ಷಕರು ; ಮೀಸಲು ಉಪ ನಿರೀಕ್ಷಕರು	೧೬೮೩	೨೦೧೯
೯	ಸಹಾಯಕ ಆರಕ್ಷಕ ಉಪನಿರೀಕ್ಷಕರು; ಸಹಾಯಕ ಮೀಸಲು ಉಪ ನಿರೀಕ್ಷಕರು	೬೨೧	೯೩೭
೧೦	ಮುಖ್ಯ ಪೇದೆಗಳು: ಸಶಸ್ತ್ರ ಮುಖ್ಯ ಪೇದೆಗಳು	೭೧೯೮	೮೫೯೪
೧೧	ಆರಕ್ಷಕ ಪೇದೆಗಳು ; ಸಶಸ್ತ್ರ ಪೇದೆಗಳು	೨೮೩೭೭	೩೨೪೪೦
		೩೮,೫೭೨	೪೪,೭೬೮

ಕುಂದಾಪುರ ತಾಲ್ಲೂಕಿನಲ್ಲಿ ಅಕ್ಕಿ ಮತ್ತು ಸಕ್ಕರೆ ಸರಬರಾಜಿನ ಬಗ್ಗೆ.

೧೯೧೯. ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).— ಮಾನ್ಯ ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಂದಾಪುರ ತಾಲ್ಲೂಕಿನಲ್ಲಿ ಜನವರಿ ೮೬ರಲ್ಲಿ ಪ್ರತಿ ಕಾರ್ಡಿಗೆ ವಿತರಿಸಿದ ಅಕ್ಕಿ ಹಾಗೂ ಸಕ್ಕರೆಯ ಪ್ರಮಾಣವೆಷ್ಟು ?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು).—

ಅ)

ಅಕ್ಕಿ.

೧) ಕುಂದಾಪುರ ಹಾಗೂ ಬೈಂದೂರು ಪುರಸಭಾ ಪ್ರದೇಶಗಳಲ್ಲಿ	೧೦ ಕೆ.ಜಿ. ಪ್ರತಿ ಕಾರ್ಡಿಗೆ
೨) ಗ್ರಾಮಾಂತರ ಪ್ರದೇಶದಲ್ಲಿ.	
ಅ) ಹಸಿರು ಪಡಿತರ ಚೀಟಿ ಹೊಂದಿದವರಿಗೆ	೧೦ ಕೆ.ಜಿ. ಪ್ರತಿ ಕಾರ್ಡಿಗೆ
ಆ) ಇತರರಿಗೆ	೫ ಕೆ.ಜಿ. ಪ್ರತಿ ಕಾರ್ಡಿಗೆ
ಸಕ್ಕರೆ.	ಇಲ್ಲ,

ಮುಸ್ಲಿಂ ಪೋಲೀಸ್ ಪೇದೆಗಳ ಗಡ್ಡದ ಆಯುಷ್ಕಾರ್ಯದ ಬಗ್ಗೆ.

೭೨೬. ಶ್ರೀ ಜಿ. ರಾಜುಗೌಡ (ಹನೂರು).— ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಸ್ಲಿಂ ಪೇದೆಗಳು ಗಡ್ಡ ಬೋಳಿಸಿಕೊಂಡೇ ವೃತ್ತಿಗೆ ಹಾಜರಾಗಬೇಕೆಂಬ ನಿಯಮವು ರಾಜ್ಯದಲ್ಲಿ ಯಾವಾಗ ಜಾರಿಗೆ ಬಂದಿದೆ?

ಆ) ಹಾಗಿದ್ದಲ್ಲಿ ಕಾನೂನಿಗೆ ವಿರೋಧವಾಗಿ ನಡೆದವರನ್ನು ಸೇವೆಯಿಂದ ಅವಮಾನಕರವಾಗಿ ತೆಗೆದುಹಾಕಲಾಗಿದೆಯೆಂಬುದು ನಿಜವೇ ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಆ) ಎಲ್ಲಾ ಪೋಲೀಸ್ ಪೇದೆಗಳು ಸ್ವಚ್ಛತೆಯಿಂದ ಹಾಜರಾಗಬೇಕೆಂಬ ನಿಯಮವು ಮೊದಲಿನಿಂದಲೂ ಇತ್ತು. ಪೋಲೀಸ್ ಅಧಿಕಾರಿಗಳು ಕರ್ತವ್ಯ ನಿರತರಾಗಿರುವಾಗ ಗಡ್ಡ ಬೆಳೆಸುವುದು ಮತ್ತು ಅಥವಾ ಉದ್ದ ಕೂದಲು ಬಿಡುವುದು ಮಾಡಕೂಡದೆಂದು ಪೋಲೀಸ್ ಮ್ಯಾನುಯಲ್‌ನಲ್ಲಿ ತಿದ್ದುಪಡಿ ಮಾಡಿ ದಿನಾಂಕ ೧೦-೯-೮೫ ರಿಂದ ಜಾರಿಗೆ ತರಲಾಯಿತು.

ಆ) ಹೌದು.

ಬೆಂಗಳೂರಿನಲ್ಲಿರುವ ಆಯುರ್ವೇದ, ಯುನಾನಿ ಹೋಮಿಯೋಪತಿ ಆಸ್ಪತ್ರೆಯ ಶಕ್ತಿಯ ಬಗ್ಗೆ.

೭೨೭. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).— ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನಲ್ಲಿರುವ ಆಯುರ್ವೇದ, ಯುನಾನಿ ಹೋಮಿಯೋಪತಿ ಆಸ್ಪತ್ರೆಗಳಲ್ಲಿರುವ ಹಾಸಿಗೆಗಳ ಸಂಖ್ಯೆ ಎಷ್ಟು ?

ಆ) ಮೇಲಿನ ಮೂರು ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾದ ಹೊರರೋಗಿಗಳ ಹಾಗೂ ಒಳರೋಗಿಗಳ ಸಂಖ್ಯೆ ಎಷ್ಟು ? (ಕಳೆದ ಮೂರು ವರ್ಷಗಳ ಅವಧಿಯ ಅಂಕಿ ಅಂಶಗಳನ್ನು ನೀಡುವುದು)

ಇ) ಭಾರತೀಯ ವೈದ್ಯಪದ್ಧತಿಯಲ್ಲಿ ಹೆಚ್ಚು ಸರಿ ವಾಸ್ತವ್ಯಕ್ಕಾಗಿ ಕಟ್ಟಡ ನಿರ್ಮಾಣದ ಬಗ್ಗೆ ಪ್ರಸ್ತಾವನೆಯೇನಾದರೂ ಸರ್ಕಾರದ ಮುಂದಿದೆಯೇ ? ಇದ್ದಲ್ಲಿ ಯೋಜನೆಯ ಅಂದಾಜು ವೆಚ್ಚವೆಷ್ಟು ? ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಈ) ಬೆಂಗಳೂರಿನಲ್ಲಿ ಪ್ರಕೃತಿ ಚಿಕಿತ್ಸಾ ಆಸ್ಪತ್ರೆ ಇದೆಯೆ ? ಇಲ್ಲವಾದಲ್ಲಿ ಆ ರೀತಿಯ ಆಸ್ಪತ್ರೆಯನ್ನು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ?